ISO
9001 & 14001
Certified Company

multiplex®

MULTIPLEX FARMER
HAPPY FARMER

# ಮಲ್ಟಿಪ್ಲೆಕ್ಸ್ ಕಾಫಿ ಸ್ಪೆಷಲ್




ಕಾಫಿ ಬೆಳೆಗಾರರ ಸಮಸ್ಯೆಯನ್ನು ಮನಗಂಡ **ಮಲ್ಟಿಪ್ಲೆಕ್ಸ್** ಸಮೂಹ ಸಂಸ್ಥೆಯ **ಕರ್ನಾಟಕ ಆಗ್ರೋ ಕೆಮಿಕಲ್ಸ್** **ಕಾಫಿ ಸ್ಪೆಷಲ್** ಹೆಸರಿನ ಸಮತೋಲನ ಪೋಷಕಾಂಶಗಳ ಉತ್ಪನ್ನವನ್ನು ಬಿಡುಗಡೆ ಮಾಡಿದೆ. ಸಂಶೋಧನೆ ಹಾಗೂ ಕ್ಷೇತ್ರ ಪ್ರಯೋಗಗಳಿಂದ ಅಭಿವೃದ್ಧಿಪಡಿಸಿದ ಈ ಉತ್ಪನ್ನ ಕಾಫಿ ಬೆಳೆಗಾರರಿಗೆ ವರದಾನವಾಗಿದೆ. ಈ ಉತ್ಪನ್ನವನ್ನು ಬಳಸುತ್ತಿರುವ ಕಾಫಿ ಬೆಳೆಗಾರರು ಉತ್ತಮ ಗುಣಮಟ್ಟದ ಹೆಚ್ಚಿನ ಇಳುವರಿ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

# ಮಲ್ಟಿಪ್ಲೆಕ್ಸ್ ಕಾಫಿ ಸ್ಪೆಷಲ್

ಮಲೆನಾಡಿನ ಮತ್ತು ಅರೆಮಲೆನಾಡಿನ ಪ್ರಮುಖ ವಾಣಿಜ್ಯ ಬೆಳೆ ಕಾಫಿ. ಈ ಭಾಗದ ಬಹುತೇಕ ಕೃಷಿಕರು ಅವಲಂಭಿತರಾಗಿರುವ ಬಹುವಾರ್ಷಿಕ ಬೆಳೆ. ಕಾಫಿಯೇ ಇವರ ಆದಾಯದ ಮೂಲ. ಇತ್ತೀಚೆಗೆ ಕರ್ನಾಟಕದಲ್ಲಿ ಕಾಫಿ ಬೆಳೆ ಇಳುವರಿ ಹಾಗೂ ಉತ್ಪಾದಕತೆ ಕಡಿಮೆ ಆಗಿದೆ. ಇದಕ್ಕೆ ಕಾರಣ ಪೋಷಕಾಂಶಗಳ ಅಸಮರ್ಪಕ ನಿರ್ವಹಣೆ ಎಂಬುದು ಅಧ್ಯಯನಗಳಿಂದ ತಿಳಿದುಬಂದಿದೆ.

ಕಾಫಿ ಬೆಳೆಗಾರರ ಈ ಸಮಸ್ಯೆಯನ್ನು ಮನಗಂಡ ಮಲ್ಟಿಪ್ಲೆಕ್ಸ್ ಸಮೂಹ ಸಂಸ್ಥೆಯ ಕರ್ನಾಟಕ ಆಗ್ರೋ ಕೆಮಿಕಲ್ಸ್ **"ಕಾಫಿ ಸ್ಪೆಷಲ್"** ಹೆಸರಿನ ಸಮತೋಲನ ಲಘು ಪೋಷಕಾಂಶಗಳ ಉತ್ಪನ್ನವನ್ನು ಬಿಡುಗಡೆ ಮಾಡಿದ್ದು, ಕಾಫಿ ಬೆಳೆಗಾರರಿಗೆ ವರದಾನವಾಗಿದೆ. ಈ ಉತ್ಪನ್ನವನ್ನು ಬಳಸುತ್ತಿರುವ ಕಾಫಿ ಬೆಳೆಗಾರರು ಉತ್ತಮ ಗುಣಮಟ್ಟದ ಹೆಚ್ಚಿನ ಇಳುವರಿ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

## ಕಾಫಿ ಸ್ಪೆಷಲ್ ಉತ್ಪನ್ನಗಳ ವಿವರ / ದೊರೆಯುವ ಪ್ರಮಾಣ ಹಾಗೂ ಬಳಕೆ

**ಮಣ್ಣಿಗೆ ಕೊಡಲು** : ಸಮತೋಲನ ಲಘುಪೋಷಕಾಂಶಗಳ ಮಿಶ್ರಣ 10 ಕೆ.ಜಿ. ಬ್ಯಾಗ್‌ನಲ್ಲಿ ದೊರೆಯುತ್ತದೆ. ಈ ಗೊಬ್ಬರವನ್ನು ವರ್ಷಕ್ಕೆ ಒಂದು ಬಾರಿ ಇತರೆ ಗೊಬ್ಬರಗಳ ಜೊತೆಯಲ್ಲಿ ಮಿಶ್ರಣ ಮಾಡಿ ಕೊಡಬಹುದು. ಅಥವಾ ಮಲ್ಟಿಪ್ಲೆಕ್ಸ್ ಕಾಫಿ ಸ್ಪೆಷಲ್ ಒಂದೇ ಆದರೂ ಕೊಡಬಹುದು. ಹೂ ಬಿಡುವ ಮುನ್ನ ಅಥವಾ ಹೂ ಬಂದ ನಂತರ ಕೊಡುವ ಗೊಬ್ಬರದ ಜೊತೆಯಲ್ಲಿ ಕೊಟ್ಟರೆ ಉತ್ತಮ ಫಲಿತಾಂಶ ಪಡೆಯಬಹುದು.

**ಎಲೆಗೆ ಸಿಂಪಡಿಸಲು** : ಕಾಫಿ ಸ್ಪೆಷಲ್ ಉತ್ಪನ್ನದಲ್ಲಿ ಕಾಫಿ ಬೆಳೆಗೆ ಅವಶ್ಯವಿರುವ ಎಲ್ಲಾ ಲಘುಪೋಷಕಾಂಶಗಳಿದ್ದು 1 ಮತ್ತು 5 ಲೀಟರ್ ಕ್ಯಾನ್‌ನಲ್ಲಿ ದೊರೆಯುತ್ತದೆ. ಬಳಕೆಯ ಪ್ರಮಾಣ 2.5 ಮಿ.ಲೀ ಪ್ರತಿ ಲೀಟರ್ ನೀರಿಗೆ ಎರಡು ಸಾರಿ ಬಳಸಬಹುದು. ಹೂ ಬರುವ ಮುನ್ನ ಮತ್ತೊಂದು ಬಾರಿ ಕಾಯಿ ಅಥವಾ ಹಣ್ಣು ಬಲಿಯುವ ಸಮಯದಲ್ಲಿ. ಈ ಉತ್ಪನ್ನವನ್ನು ಎಲ್ಲಾ ಕೀಟನಾಶಕ ಮತ್ತು ಶಿಲೀಂಧ್ರನಾಶಕಗಳ ಜೊತೆಯಲ್ಲಿ ಕೂಡಿಸಿ ಸಿಂಪಡಿಸಬಹುದು.

**ಸೂಚನೆ** : ಸಿಂಪರಣೆಯನ್ನು ದಿನದ ತಂಪಾದ ಸಮಯದಲ್ಲಿ ಎಲೆಯ ಎರಡೂ ಬದಿ ನೆನೆಯುವಂತೆ ಕೊಡಬೇಕು.

## ಮಲ್ಟಿಪ್ಲೆಕ್ಸ್ ಕಾಫಿ ಸ್ಪೆಷಲ್ ಉಪಯೋಗಗಳು

- ಇದರಲ್ಲಿ ಎಲ್ಲಾ ಲಘು ಪೋಷಕಾಂಶಗಳಿರುವುದರಿಂದ ಉತ್ತಮ ಗುಣಮಟ್ಟದ ಹೆಚ್ಚಿನ ಇಳುವರಿ ಪಡೆಯಲು ಸಹಕಾರಿ.
- ಬೋರಾನ್ ಲಘು ಪೋಷಕಾಂಶ ಇರುವುದರಿಂದ ಬಂದತಹ ಹೂಗಳಲ್ಲಿ ಪರಾಗಸ್ಪರ್ಶ ಕ್ರಿಯೆ ಹಾಗೂ ಕಾಯಿ ಕಟ್ಟುವಿಕೆ ಹೆಚ್ಚಿಸುತ್ತದೆ
- ಇದರಲ್ಲಿರುವ **ಸತು (ಜಿಂಕ್)** ಸಸ್ಯ ಪ್ರಚೋದಕಗಳ ಉತ್ಪತ್ತಿ ಹೆಚ್ಚಿಸಿ ಸಾರಜನಕ ಮತ್ತು ಮಣ್ಣಿನಲ್ಲಿರುವ ಇತರೆ ಪೋಷಕಾಂಶಗಳ ಬಳಕೆಯನ್ನು ಹೆಚ್ಚಿಸುತ್ತದೆ.
- ಕಾಫಿ ಬೆಳೆಯಲ್ಲಿ ಸತುವಿನ ಕೊರತೆ ಇದ್ದರೆ ಎಲೆಗಳ ಆಕಾರ ಸರಿ ಇರುವುದಿಲ್ಲ. ಎಲೆಯಿಂದ ಎಲೆಯ ಅಂತರ, ಗೆಣ್ಣುಗಳ ಅಂತರ ಕಡಿಮೆ ಇರುತ್ತದೆ, ಕೆಲವೊಮ್ಮೆ ರೆಂಬೆ ಸುಳಿಯ ಭಾಗದಿಂದ ಒಣಗುತ್ತದೆ. **ಕಾಫಿ ಸ್ಪೆಷಲ್ ಬಳಸುವುದರಿಂದ ಸಸ್ಯಗಳಲ್ಲಿ ಈ ಸಮಸ್ಯೆ ಬರುವುದಿಲ್ಲ.**
- ಕಾಫಿ ಬೆಳೆಯಲ್ಲಿ ಶಿಫಾರಸ್ಸಿನಂತೆ ಸಾರಜನಕ ನೀಡಲಾಗುತ್ತಿದ್ದರೂ ಸಸ್ಯಗಳು ಸಾರಜನಕ ಬಳಸಿಕೊಳ್ಳುವ ಪ್ರಮಾಣ ಕಡಿಮೆ ಆಗಿ ಇಳುವರಿಯ ಮೇಲೆ ಪರಿಣಾಮ ಬೀರುತ್ತದೆ. ಇದಕ್ಕೆ ಉತ್ತರ ಮಾಲಿಬ್ದಿನಂ ಲಘುಪೋಷಕಾಂಶ. ಕಾಫಿ ಸ್ಪೆಷಲ್ ಉತ್ಪನ್ನದಲ್ಲಿ ಮಾಲಿಬ್ದಿನಂ ಇರುವುದರಿಂದ ಇದನ್ನು ಬಳಸಿದಾಗ ಸಸ್ಯಗಳು ಸಾರಜನಕ ಹೀರಿಕೊಳ್ಳುವ ಪ್ರಮಾಣ ಹೆಚ್ಚುತ್ತದೆ, ಹಾಗೂ ಇಳುವ-ರಿಯು ಸಹ ವೃದ್ಧಿಸುತ್ತದೆ.
- ಸತು, ಮ್ಯಾಂಗನೀಸ್ ಮತ್ತು ಕಬ್ಬಿಣದ ಅಂಶ ಹೊಂದಿರುವುದರಿಂದ ಎಲೆಗಳು ಸದಾ ಹಸಿರಾಗಿರುತ್ತವೆ. ಸಸಿಯಲ್ಲಿ ದ್ಯುತಿಸಂಶ್ಲೇಷಣೆ ಕ್ರಿಯೆ ಹೆಚ್ಚಾಗಿ ಮಣ್ಣಿಗೆ ನೀಡಿರುವ ಇತರೆ ಪೋಷಕಾಂಶಗಳ ಬಳಕೆ ಹೆಚ್ಚುವುದರ ಜೊತೆಗೆ ಆರೋಗ್ಯವಾದ ಬೆಳೆ ಹಾಗೂ ಉತ್ತಮ ಇಳುವರಿ ಪಡೆಯಬಹುದು.
- ಕಾಪರ್ ಇರುವುದರಿಂದ ಸಸ್ಯಗಳಲ್ಲಿ ಶಿಲೀಂದ್ರ ರೋಗಗಳ ವಿರುದ್ಧ ರೋಗನಿರೋಧಕ ಶಕ್ತಿ ವೃದ್ಧಿಸುವುದರ ಜೊತೆಗೆ ಕಾಫಿ ಪರಿಮಳ ಹಾಗೂ ಸುವಾಸನೆಯನ್ನು ವೃದ್ಧಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

---


ತಯಾರಕರು

**ಕರ್ನಾಟಕ ಆಗ್ರೋ ಕೆಮಿಕಲ್ಸ್**

#180, 1ನೇ ಮುಖ್ಯರಸ್ತೆ, ಮಹಾಲಕ್ಷ್ಮೀ ಬಡಾವಣೆ, ಬೆಂಗಳೂರು – 560 086. ಭಾರತ

ಫೋ: 080 – 23494406, 23497360, 23497464

ಇಮೇಲ್: multiplex@multiplexgroup.com ವೆಬ್‌ಸೈಟ್: www.multiplexgroup.com